ಆ) ಇಲ್ಲ

ಇ) **ಪದವಿ ಶಿಕ್ಷಣ**

| | | |
|---|---|---|
| ಬಿ. ಎಸ್ಸಿ (ಕೃಷಿ) | - | 200 |
| ಪಶು ವೈದ್ಯಕೀಯ | - | 32 |
| ಬಿ.ಎಸ್ಸಿ. (ಕೃಷಿ ಮಾರುಕಟ್ಟೆ) | - | 26 |
| ಬಿ.ಎಸ್ಸಿ (ಅರಣ್ಯ) | - | 26 |
| ಕೃಷಿ ಇಂಜನಿಯರಿಂಗ್ | - | 23 |
| ಗೃಹ ವಿಜ್ಞಾನ | - | 42 |

**ಸ್ನಾತಕೋತ್ತರ ಶಿಕ್ಷಣ :**

ಸ್ನಾತಕೋತ್ತರ ಶಿಕ್ಷಣಕ್ಕೆ ಲಭ್ಯವಿರುವ ಸಿಬ್ಬಂದಿ ಮತ್ತು ಪ್ರಯೋಗ ಶಾಲೆ ಸೌಲಭ್ಯಗಳನ್ನು ಆಧರಿಸಿ, ಅಂದಾಜು 10ರಿಂದ 15 ವಿದ್ಯಾರ್ಥಿಗಳನ್ನು ಪ್ರತಿ ವಿಭಾಗಕ್ಕೆ ಸೇರಿಸಿಕೊಳ್ಳಲಾಗುತ್ತಿದೆ.

ಈ) ಇಲ್ಲ.

ಉ) ಉದ್ಭವಿಸುವುದಿಲ್ಲ.

**ಕಂದಾಯ ಇಲಾಖೆಯ ದ್ವಿತೀಯ ದರ್ಜೆ ಸಹಾಯಕರು**

397 - ಶ್ರೀ ಭಾಬುರಾವ್ ಚವಾಣ್ (ಶಹಾಬಾದ್) ; ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

*ಅ) ಶಿಕ್ಷಣ ಇಲಾಖೆಯಲ್ಲಿ ನೀಡಿರುವಂತೆ 15 ವರ್ಷಗಳ ಸತತ ಸೇವೆ ಸಲ್ಲಿಸಿರುವ ಕಂದಾಯ ಇಲಾಖೆಯ ದ್ವಿತೀಯ ದರ್ಜೆ ಸಹಾಯಕರಿಗೆ ಮೊದಲನೆಯ ದರ್ಜೆ ಸಹಾಯಕರ ಹುದ್ದೆಗೆ ಸ್ವಯಂಚಾಲಿತ ಬಡ್ತಿಯನ್ನು ನೀಡಲಾಗಿದೆಯೇ?*

*ಆ) ಇಲ್ಲದಿದ್ದಲ್ಲಿ ಒಂದೇ ಸರ್ಕಾರದ ಎರಡು ಇಲಾಖೆಗಳಲ್ಲಿ ದ್ವಿಮುಖ ನೀತಿ ಜಾರಿಯಲ್ಲಿರಲು ಕಾರಣಗಳೇನು?*

*ಇ) ಗ್ರಾಮ ಲೆಕ್ಕಾಧಿಕಾರಿಗಳು ಹೆಚ್ಚಿನ ಸಂಖ್ಯೆಯಲ್ಲಿದ್ದು ದ್ವಿತೀಯ ದರ್ಜೆ ಸಹಾಯಕರುಗಳ ಸಂಖ್ಯೆ ತುಲನಾತ್ಮಕವಾಗಿ ಕಡಿಮೆ ಇರುವ ಹಿನ್ನೆಲೆಯಲ್ಲಿ ಪದೋನ್ನತಿ ಅವಕಾಶ ದ್ವಿತೀಯ ದರ್ಜೆ ಸಹಾಯಕರುಗಳಿಗೆ ಕಡಿಮೆ ಇರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ?*

*ಈ) ಇದನ್ನು ನಿವಾರಿಸಲು ಸರ್ಕಾರದವರು ದ್ವಿತೀಯ ದರ್ಜೆಯ ಸಹಾಯಕರುಗಳಿಗೆ ಶಿಕ್ಷಣ ಇಲಾಖೆಯಲ್ಲಿ ವಿಶೇಷ ಪ್ರಾಶಸ್ತ್ಯ ನೀಡಿರುವಂತೆ ಕಂದಾಯ ಇಲಾಖೆಯಲ್ಲಿಯೂ ಕ್ರಮ ಕೈಗೊಳ್ಳಲು ನಿರ್ಧರಿಸಿದೆಯೇ?*

*ಉ) ಹಾಗಿದ್ದಲ್ಲಿ ಇದನ್ನು ಯಾವಾಗ ಕಾರ್ಯಗತಗೊಳಿಸಲಾಗುವುದು?*

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಕಂದಾಯ ಸಚಿವರು):

ಅ) ಇಲ್ಲ.

ಆ) ಹಿಂದೆ ಇದ್ದ ಸರ್ಕಾರ 29-12-1986ರಲ್ಲಿ ಶಿಕ್ಷಣ ಇಲಾಖೆಯ ನೌಕರರ ಬೇಡಿಕೆಗಳ ಮೇಲೆ ಆ ಇಲಾಕೆಯಲ್ಲಿ 15 ವರ್ಷಗಳ ಕ್ರಮಬದ್ಧ ಸೇವೆ ಸಲ್ಲಿಸಿದ ಎರಡನೇ ದರ್ಜೆಯ ಸಹಾಯಕರು ಮೊದಲನೇ ದರ್ಜೆ ಸಹಾಯಕರ ಹುದ್ದೆಗೆ ಬಡ್ತಿ ಪಡೆಯಲು ನೆರವಾಗುವಂತೆ ಅಷ್ಟು ಸಂಖ್ಯೆಯ ಎರಡನೇ ದರ್ಜೆ ಸಹಾಯಕರ ಹುದ್ದೆಗಳನ್ನು ಪ್ರಥಮ ದರ್ಜೆ ಸಹಾಯಕರ ಹುದ್ದೆಗಳಾಗಿ ಮೇಲ್ದರ್ಜೆಗೆ ಏರಿಸಲು ಆದೇಶ ನೀಡಿದೆ. ಈ ಸವಲತ್ತನ್ನು ಕಂದಾಯ ಇಲಾಖಾ ನೌಕರರಿಗೆ ಆ ವೇಳೆಯಲ್ಲಿ ನೀಡಿಲ್ಲ.

1991 ರಿಂದೀಚೆಗೆ ಕಂದಾಯ ಇಲಾಖೆಯ ಎರಡನೇ ದರ್ಜೆ ಸಹಾಯಕರಿಗೆ ಕರ್ನಾಟಕ ನಾಗರೀಕ ಸೇವೆಗಳು (ಹಿರಿಯ ಕಾಲಿಕ ವೇತನ ಶ್ರೇಣಿಗೆ ಸ್ವಯಂಚಾಲಿತ ವಿಶೇಷ ಬಡ್ತಿ) 1991ರ ನಿಯಮಗಳ ಅನ್ವಯ ಅದೇ ಹುದ್ದೆಯಲ್ಲಿ 15 ವರ್ಷ ಸೇವ ಸಲ್ಲಿಸಿದ ನಂತರ ಹಿರಿಯ ಕಾಲಿಕ ವೇತನ ಶ್ರೇಣಿಗೆ ಸ್ವಯಂಚಾಲಿತ ಬಡ್ತಿಯನ್ನು ನೀಡಲಾಗುತ್ತಿದೆ.

ಇ) ಗ್ರಾಮ ಲೆಕ್ಕಿಗರ ಹುದ್ದೆಗಳು 9213 ಮತ್ತು ಎರಡನೇ ದರ್ಜೆ ಸಹಾಯಕರ ಹುದ್ದೆಗಳು 2768 ಇವೆ. ಗ್ರಾಮ ಲೆಕ್ಕಿಗರು ಹೆಚ್ಚಿನ ಸಂಖ್ಯೆಯಲ್ಲಿ ಇರುವುದರಿಂದ ಮೊದಲನೆ ದರ್ಜೆ ಸಹಾಯಕರ ಹುದ್ದೆಗೆ ಬಡ್ತಿ ಕೊಡುವಾಗ ಕೆಳಕಂಡಂತೆ ಕೊಡಲಾಗುತ್ತಿದೆ.

ಗ್ರಾಮ ಲೆಕ್ಕಿಗರಿಂದ ಶೇಕಡ 40 ಎರಡನೇ ದರ್ಜೆ ಸಹಾಯಕರಿಂದ ಶೇ.30. ಆದುದರಿಂದ, ಎರಡನೇ ದರ್ಜೆ ಸಹಾಯಕರುಗಳಿಗೆ ಬಡ್ತಿ ಹೊಂದುವ ಅವಕಾಶಗಳು ಕಡಿಮೆ ಇರುವುದಿಲ್ಲ.

ಈ) ಇಲ್ಲ.

ಉ) ಈ ಪ್ರಶ್ನೆ ಉದ್ಭವಿಸುವುದಿಲ್ಲ.

**ರಸಗೊಬ್ಬರ ಇಲ್ಲದೆ ತಳಿ ಸುಧಾರಣೆಯ ಸಂಶೋಧನೆ.**

487 - ಶ್ರೀ ಬಾಬಾಗೌಡ (ಶಹಾಬಾದ್) : ಮಾನ್ಯ ಕೃಷಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೆ?

*ಅ) ಹಸಿರು ಕ್ರಾಂತಿ ಮಾಡಲಿಕ್ಕೆ ಹೆಚ್ಚು ಆಹಾರ ಅಂದರೆ ಗೊಬ್ಬರ ಸೇವಿಸಿ ಹೆಚ್ಚು ಇಳುವರಿ ಕೊಡುವ ತಳಿಗಳನ್ನು ಶೋಧಿಸಿದಂತೆ ರಸಗೊಬ್ಬರ ಇಲ್ಲದೇ ಕಡಿಮೆ ನೀರು ಬಳಸಿ ಸಾಧಾರಣ ಮಟ್ಟಿಗೆ ಇಳುವರಿ ಕೊಡುವ ತಳಿಗಳ ಸಂಶೋಧನೆ ಮಾಡಲು ಸರ್ಕಾರವು ಪ್ರಯತ್ನಿಸುತ್ತಿದೆಯೇ?*

*ಆ) ಕೃಷಿ ಲಾಭದಾಯಕವಾಗುವಂತೆ ವಿದ್ಯುತ್ ಮತ್ತು ಇಂಧನ ಬಳಸದೇ ಕೃಷಿ ಉಪಕರಣಗಳನ್ನು ತಯಾರಿಸುವ ದಿಕ್ಕಿನಲ್ಲಿ ತಂತ್ರಜ್ಞಾನ ಬೆಳೆಸಲು ಯೋಜಿಸಲಾಗಿದೆಯೇ?*

ಶ್ರೀ ಎನ್. ಹುಚ್ಚಮಾಸ್ತಿಗೌಡ (ಕೃಷಿ ಸಚಿವರು) :

ಅ) ವಿವಿಧ ಹವಾಮಾನಗಳು ಮತ್ತು ಮಣ್ಣಿನ ಗುಣಗಳಿಗೆ ಹೊಂದಿಕೊಂಡು ಉತ್ತಮ ಇಳುವರಿಯನ್ನು ಕೊಡತಕ್ಕ ಬೆಳೆ ತಳಿಗಳನ್ನು ಅಭಿವೃದ್ಧಿಪಡಿಸುವ ದಿಕ್ಕಿನಲ್ಲಿ ಕೃಷಿ ವಿಶ್ವವಿದ್ಯಾನಿಲಯ, ಬೆಂಗಳೂರು ಸತತವಾಗಿ ಶ್ರಮಿಸುತ್ತಿದೆ. ಕಡಮೆ ನೀರನ್ನು ಬಳಸಿ ಹೆಚ್ಚು ಇಳುವರಿಯನ್ನು ಕೊಡತಕ್ಕ ಬೆಳೆ ತಳಿಗಳನ್ನು ಅಭಿವೃದ್ಧಿಪಡಿಸಲಾಗಿದೆ.